ಪಿ .ಡಬ್ಲ್ಯೂ.1

<u>ದಿನಾಂಕಃ 29.03.2021</u>
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
<u>ಪಾಟೀ ಸವಾಲು ಪ್ರತಿವಾದಿಯರ ಪರವಾಗಿ  ಶ್ರೀ ಎಸ್.ವಿ.ಕೆ ವಕೀಲರಿಂದ ಃ</u>

3. ನನ್ನ ತಂದೆ ರಸೂಲ ಸಾಬ 1987 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಾಯಿ ತೀರಿ ಹೋಗಿ ಸುಮಾರು 70 ವರ್ಷಗಳಾಯಿತು. ನನ್ನ ಈಗಿನ ವಯಸ್ಸು 55 ವರ್ಷ. ನನ್ನ ತಾತ ದಾವುಲಸಾಬ ತೀರಿ ಹೋಗಿ ಸುಮಾರು 60 ವರ್ಷಗಳಾಯಿತು. ನನ್ನ ಮೇಲೆ ಹೇಳಿದ ತಾತನಾದ ದಾವುಲಸಾಬನ ಹೆಂಡತಿ 1983 ರಲ್ಲಿ ತೀರಿ ಹೋಗಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರ ತಂದೆ ತೀರಿ ಹೋಗಿ ಸುಮಾರು 35 ವರ್ಷಗಳಾಯಿತು. ಈ ದಾವೆಯನ್ನು ಸಲ್ಲಿಸಿದ 3 ತಿಂಗಳ ನಂತರ ಪ್ರತಿವಾಯರ ತಾಯಿ ತೀರಿ ಹೋಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ಹಾಗೂ ಪ್ರತಿವಾದಿಯರ ತಂದೆಗೆ ಇಬ್ಬರು ತಂಗಿಯರು ಎಂದರೆ ಸರಿ. ಅವರ ಹೆಸರು ಹಾಜುಮಾ ಹಾಗೂ ರಾಜುಮಾ ಎಂದರೆ ಸರಿ. ಮೇಲೆ ಹೇಳಿದ ಹಾಜುಮಾ ಮತ್ತು ರಾಜುಮಾ ತೀರಿ ಹೋಗಿರುತ್ತಾರೆ. ಸದರಿ ಹಾಜುಮಾಗೆ 5 ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ. ಸದರಿ ಹಾಜುಮಾ ರವರ 6 ಜನ ಮಕ್ಕಳಲ್ಲಿ ಇಬ್ಬರು ಹೆಣ್ಣು ಮಕ್ಕಳು ಜೀವಂತ ಇದ್ದಾರೆ, ಉಳಿದವರು ತೀರಿ ಹೋಗಿರುತ್ತಾರೆ. ಸದರಿ ಜೀವಂತ ಇರುವ ಇಬ್ಬರು ಹೆಣ್ಣು ಮಕ್ಕಳ ಹೆಸರು ಶರೀಫಾ ಮತ್ತು ನೂರಜಹಾನ. ಸದರಿ ರಾಜುಮಾಗೆ ಇಬ್ಬರು ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು, ಅವರಲ್ಲಿ ಒಬ್ಬ ಗಂಡು ಮಗ ತೀರಿ ಹೋಗಿರುತ್ತಾನೆ. ಸದರಿ ರಾಜುಮಾ ರವರ ಮಕ್ಕಳು ಮುಂಬೈನಲ್ಲಿ ವಾಸ ಮಾಡುತ್ತಿದ್ದಾರೆ. ಮೇಲೆ ಹೇಳಿದ ಹಾಜುಮಾ ರವರ ಇಬ್ಬರು ಹೆಣ್ಣು ಮಕ್ಕಳು ನಾಯ್ಕಲನಲ್ಲಿ ವಾಸ ಮಾಡುತ್ತಿದ್ದಾರೆ. ಮೇಲೆ ಹೇಳಿದ ರಾಜುಮಾ ಜೀವಂತ ಇದ್ದಾರೆ ಎಂದರೆ ಸರಿಯಲ್ಲ. ಸದರಿ ರಾಜುಮಾ ತೀರಿ ಹೋಗಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಪ್ರತಿವಾದಿಯರಿಗೆ 3 ಜನ ಸಹೋದರಿಯರು ಇದ್ದಾರೆ ಎಂದರೆ ಸರಿ. ಅವರ ಹೆಸರು ಸಲೀಮಾ, ಸುಲ್ತಾನಾ ಹಾಗೂ ರಜೀಯಾ ಬೇಗಂ ಎಂದರೆ ಸರಿ. ಸದರಿ ಸಲೀಮಾ ದೋರನಹಳ್ಳಿಯಲ್ಲಿ, ಸುಲ್ತಾನಾ ಇಲಕಲ್‌ನಲ್ಲಿ ಹಾಗೂ ರಜೀಯಾ ವಾಡಿಯಲ್ಲಿ ವಾಸ

ಮಾಡುತ್ತಿದ್ದಾರೆ ಎಂದರೆ ಸರಿ. ನಾಯ್ಕಲನಲ್ಲಿ ನಾನು ವಾಸಮಾಡುತ್ತಿರುವ ಮನೆಯ ನಂಬರ ನನಗೆ ನೆನಪು ಇಲ್ಲ. ಸದರಿ ಮನೆ ನಮಗೆ ನಮ್ಮ ಹಿರಿಯರಿಂದ ಬಂದಿರುತ್ತದೆ. ಪ್ರತಿವಾದಿಯರು ವಾಸ ಮಾಡುತ್ತಿರುವ ಮನೆ ಅವರಿಗೆ ಅವರ ಹಿರಿಯರಿಂದ ಬಂದಿರುತ್ತದೆ. ಈ ದಾವೆಯನ್ನು ನಾನು ಸರ್ವೆ ನಂ. 81, 82, 83 ಹಾಗೂ 140 ಕ್ಕೆ ಸಲ್ಲಿಸಿರುತ್ತೇನೆ. ನಾನು ಹಾಗೂ ಪ್ರತಿವಾದಿಯರು ವಾಸ ಮಾಡುತ್ತಿರುವ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ.

5. ಮುಂಬೈಯಲ್ಲಿ ಇರುವಂತಹ ಮನೆಯನ್ನು ಖರೀದಿ ಮಾಡಿ ಸುಮಾರು 40 ವರ್ಷಗಳಾಯಿತು. ಮುಂಬೈಯಲ್ಲಿರುವ ಸದರಿ ಮನೆಯನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ. ನಾನು ಶಾಲೆಗೆ ಹೋಗಿಲ್ಲ. ಸುಮಾರು 4-5 ವರ್ಷಗಳಿಂದ ನಾನು ದಾವಾ ಆಸ್ತಿಗಳ ಪಹಣಿಯನ್ನು ನೋಡುತ್ತಿದ್ದೇನೆ. ಸದರಿ ಆಸ್ತಿಗಳ ಪಹಣಿ ಪತ್ರಿಕೆಯಲ್ಲಿ ಬರೆದಂತಹ ವಿಷಗಳು ಸುಳ್ಳು ಇರುತ್ತದೆ. ಸದರಿ ಪಹಣಿ ಪತ್ರಿಕೆಯಲ್ಲಿ ಸುಮಾರು 30 ವರ್ಷ ಮೇಲಿನಿಂದ ಸುಳ್ಳು ಬರೆದಿರುತ್ತಾರೆ. ನನ್ನ ತಂದೆ ಜೀವಂತ ಇದ್ದಾಗ ನಾನು ಹಾಗೂ ಮುಂಬೈಯಲ್ಲಿರುವ ನನ್ನ ಮಗ ನಾಯ್ಕಲನಲ್ಲಿರುವ ಮನೆಯಲ್ಲಿ ವಾಸ ಮಾಡುತ್ತಿದ್ದೆವು. ನನ್ನ ಮಗ ಮುಂಬೈಗೆ ಹೋಗಿ ಸುಮಾರು 25 ರಿಂದ 30 ವರ್ಷಗಳಾಯಿತು. ನನ್ನನ ಸದರಿ ಮಗ 9 ನೇ ತರಗತಿಯವರೆಗೆ ಓದಿರುತ್ತಾನೆ. ಸದರಿ ನನ್ನ ಮಗನ ಹೆಂಡತಿ ಎಷ್ಟು ಓದಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಸದರಿ ನನ್ನ ಮಗ ನಾಯ್ಕಲನಲ್ಲಿ ಇದ್ದ ಸಂದರ್ಭದಲ್ಲಿ ಸದರಿ ಆಸ್ತಿಗಳ ಪಹಣಿಯನ್ನು ಓದಿ ನನಗೆ ತಿಳಿಸಿರುವುದಿಲ್ಲ. ದಾವಾ ಆಸ್ತಿಗಳ ಕಂದಾಯವನ್ನು ಪ್ರತಿವಾದಿಯರು ಪಾವತಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ನಾಯ್ಕಲನಲ್ಲಿ ನಾನು ವಾಸ ಮಾಡುತ್ತಿರುವ ಮನೆಯ ತೆರಿಗೆಯನ್ನು ನನ್ನ ತಂದೆ ಜೀವಂತ ಇದ್ದಾಗ ನನ್ನ ತಂದೆ ಪಾವತಿ ಮಾಡುತ್ತಿದ್ದರು ಹಾಗೂ ನನ್ನ ತಂದೆ ತೀರಿ ಹೋದ ನಂತರ ಸದರಿ ತೆರಿಗೆಯನ್ನು ನಾನು ಪಾವತಿ ಮಾಡುತ್ತಿದ್ದೇನೆ ಎಂದರೆ ಸರಿ. ಸದರಿ ಪ್ರತಿವಾದಿಯರ ನಾಯ್ಕಲನಲ್ಲಿ ನಾನು ವಾಸ ಮಾಡುತ್ತಿರುವ ಮನೆಯ ತೆರಿಗೆಯನ್ನು ನನ್ನ ತಂದೆ ಜೀವಂತ ಇದ್ದಾಗ ನನ್ನ ತಂದೆ ಪಾವತಿ ಮಾಡುತ್ತಿದ್ದರು ಹಾಗೂ ನನ್ನ ತಂದೆ ತೀರಿ ಹೋದ ನಂತರ ಸದರಿ ತೆರಿಗೆಯನ್ನು ನಾನು ಪಾವತಿ ಮಾಡುತ್ತಿದ್ದೇನೆ ಎಂದರೆ ಸರಿ. ಅದೇ ರೀತಿಯಾಗಿ ಪ್ರತಿವಾದಿಯರು ವಾಸ ಮಾಡುತ್ತಿರುವ ಮನೆಯ ತೆರಿಗೆಯನ್ನು ಅವರ ತಂದೆ ಜೀವಂತ ಇದ್ದಾಗ ಅವರ ತಂದೆ ಪಾವತಿ ಮಾಡುತ್ತಿದ್ದರು ಹಾಗೂ ಅವರ ತಂದೆ ತೀರಿ ಹೋದ ನಂತರ ಸದರಿ ತೆರಿಗೆಯನ್ನು ಪ್ರತಿವಾದಿಯರು ಪಾವತಿ

ಮಾಡುತ್ತಿದ್ದಾರೆ ಎಂದರೆ ಸರಿ.

6. 40 ವರ್ಷಗಳಿಂದ ಪಹಣಿಯನ್ನು ತಪ್ಪಾಗಿ ಬರೆದಿರುತ್ತಾರೆ ಎಂದು ನಾನು ಕಂದಾಯ ನ್ಯಾಯಾಲಯಕ್ಕೆ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲ. ನನ್ನ ತಂದೆ, ನನ್ನ ತಾತ ಹಾಗೂ ಪ್ರತಿವಾದಿಯರ ತಂದೆಯ ಹೆಬ್ಬೆಟ್ಟಿನ ಗುರುತುಗಳನ್ನು ನನಗೆ ಗುರುತಿಸಲು ಆಗುವುದಿಲ್ಲ. ನನ್ನ ತಂದೆ, ನನ್ನ ತಾತ ಹಾಗೂ ಪ್ರತಿವಾದಿಯರ ತಂದೆ ದಿಃ 2-7-1970 ರಂದು ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರವನ್ನು ಮಾಡುವ ಪೂರ್ವದಲ್ಲಿ ದಾವಾ ಆಸ್ತಿಗಳ ಕಬ್ಜಾವನ್ನು ನನ್ನ ತಂದೆ, ನನ್ನ ತಾತ ಹಾಗೂ ಪ್ರತಿವಾದಿಯರ ತಂದೆ 1 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಗುಂಡೆರಾವ ತಂದೆ ಭೀಮಶೇನರಾವ ಪಟವಾರಿ ಇದ್ದರು. ಅವರು ತೀರಿ ಹೋಗಿರುತ್ತಾರೆ. ಸದರಿ ಗುಂಡೆರಾವಗೂ ಹಾಗೂ ನಮಗೂ ಯಾವುದೇ ದ್ವೇಷ ಇರುವುದಿಲ್ಲ. ನಿಂಗನಗೌಡ ತಂದೆ ಬಸನಗೌಡ ಮಾಲೀಪಾಟೀಲ ಮನಗನಾಳ ಗ್ರಾಮ ಇದ್ದರು ಎಂದರೆ ಸರಿ. ಅವರು ತೀರಿ ಹೋಗಿರುತ್ತಾರೆ. ಸದರಿ ನಿಂಗನಗೌಡರಿಗೂ ಹಾಗೂ ನಮಗೂ ಯಾವುದೇ ದ್ವೇಷ ಇರುವುದಿಲ್ಲ. ಮೇಲೆ ಹೇಳಿದ ಗುಂಡೆರಾವ ಹಾಗೂ ನಿಂಗನಗೌಡರ ಸಮಕ್ಷಮ ಮೇಲೆ ಹೇಳಿದ ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಆದಾಗಿನಿಂದ 1 ನೇ ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕ ಹಾಗೂ ಕಬ್ಜಾದಾರ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯು ದೊಡ್ಡ ಮಗನಾಗಿರುವುದರಿಂದ ಅವರ ತಂದೆ ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿಯ ಹೆಸರಿಗೆ ಮಾಡಿಸಿರುತ್ತಾರೆ ಎಂದು ನುಡಿಯುುತ್ತಾರೆ.

7. ದಾವಾ ಆಸ್ತಿಗಳ ಪಹಣಿ ಪತ್ರಿಕೆ 1 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆಯಾಗುವ ಪೂರ್ವದಲ್ಲಿ ಸದರಿ ಆಸ್ತಿಗಳ ಪಹಣಿ ನನ್ನ ತಂದೆಯ ಹೆಸರಿನಲ್ಲಿಯಾಗಲಿ ಅಥವಾ ಪ್ರತಿವಾದಿಯರ ತಂದೆಯ ಹೆಸರಿನಲ್ಲಿಯಾಗಲಿ ಇರಲಿಲ್ಲ. ನನ್ನ ತಂದೆ ಮತ್ತು ನನ್ನ ತಾತ ತೀರಿ ಹೋದ ನಂತರ 1 ನೇ ಪ್ರತಿವಾದಿಯ ತಂದೆ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳನ್ನು 1 ನೇ ಪ್ರತಿವಾದಿಯ ಹೆಸರಿಗೆ ಮಾಡಿಸಿರುತ್ತಾರೆ. 1980 ನೇ ಇಸ್ವಿಯಲ್ಲಿ ನನ್ನ ಮೇಲೆ ಹೇಳಿದ ತಾತನಾದ ದಾವುಲಸಾಬ ತೀರಿ

ಹೋಗಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರ ತಂದೆ 1997 ನೇ ಇಸ್ವಿಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಅವರು ತೀರಿ ಹೋದ ಇಸ್ವಿ ಗೊತ್ತಿಲ್ಲ ಆದರೆ ಅವರು 30 ರಿಂದ 35 ವರ್ಷಗಳಿಂದ ತೀರಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿ ಹೋದ 10 ರಿಂದ 15 ವರ್ಷಗಳ ನಂತರ ಪ್ರತಿವಾದಿಯರ ತಂದೆ ತೀರಿ ಹೋಗಿರುತ್ತಾರೆ. ನನ್ನ ತಂದೆ ತೀರಿ ಹೋದಾಗ ನನ್ನ ವಯಸ್ಸು ಸುಮಾರು 4 ರಿಂದ 5 ವರ್ಷ ಇತ್ತು. ಪ್ರತಿವಾದಿಯರ ತಂದೆ ತೀರಿ ಹೋದಾಗ ನನ್ನ ವಯಸ್ಸು ಸುಮಾರು 10 ರಿಂದ 15 ವರ್ಷ ಇತ್ತು. ಪ್ರತಿವಾದಿಯರ ತಂದೆ ತೀರಿ ಹೋದ ಇಸ್ವಿ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ 1987 ನೇ ಇಸ್ವಿಯಲ್ಲಿ ತೀರಿ ಹೋಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಸದರಿ ಕ್ರಯ ಪತ್ರ ಆದಾಗಿನಿಂದ 1 ನೇ ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕ ಹಾಗೂ ಕಬ್ಜಾದಾರ ಎಂಬ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿಗೆ ಕ್ರಯ ಪತ್ರ ಆದ ನಂತರ ದಾವಾ ಆಸ್ತಿಗಳ ಪಹಣಿ 1 ನೇ ಪ್ರತಿವಾದಿಯ ಹೆಸರಿಗೆ ಆಯಿತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹೇಳುತ್ತಾರೆ ಅದು ಸುಳ್ಳು ಎಂದು. 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗಾಗಲಿ ನನ್ನ ತಂದೆಗಾಗಲಿ ಸದರಿ ಕ್ರಯ ಪತ್ರ ಆದನಂತರ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.